ಸರ್ಕಾರವು ೧೯೮೨-೮೩, ೧೯೮೩-೮೪ ಮತ್ತು ೧೯೮೪-೮೫ನೇ ಸಾಲುಗಳಿಗೆ ತಾನು ಕೊಡ ಬೇಕಾಗಿದ್ದ ಬಡ್ಡಿ ಸಹಾಯ ಧನವನ್ನು ಈಗಾಗಲೇ ಬಿಡುಗಡೆ ಮಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೩) ಆರ್ಥಿಕ ಸಂಸ್ಥೆಗಳ ನಿಗದಿಪಡಿಸಿದ ದಿನಾಂಕದೊಳಗಾಗಿ ಬೊರುಪಾವತಿ ಆಗುವ ಚಾಲ್ತಿ ಸಾಲ ಗಳ ಮೇಲೆ ರೈತರಿಂದ ಶೇ ೭ರಂತೆ ಮಾತ್ರ ಬಡ್ಡಿಯನ್ನು ವಸೂಲಿ ಮಾಡುತ್ತಿದ್ದು ಇದು ನಬಾರ್ಡ್ ನವರು ಅಪೆಕ್ಸ್ ಬ್ಯಾಂಕಿಗೆ ಸಾಲ ಕೊಡುವಾಗ ವಿಧಿಸುವ ಬಡ್ಡಿದರಕ್ಕೆ ಸಮನಾಗಿದೆ. ನಬಾರ್ಡ್ ಸಂಸ್ಥೆ ನೀಡುವ ಸಾಲವಲ್ಲದೆ ಅಪೆಕ್ಸ್ ಬ್ಯಾಂಕ್ ಜಿಲ್ಲಾ ಬ್ಯಾಂಕ್ ಹಾಗೂ ಪ್ರಾಥಮಿಕ ಸರಕಾರ ಸಂಘಗಳು ತಮ್ಮ ತಮ್ಮ ಸಂಪನ್ಮೂಲಗಳಿಂದಲೂ ಸಹ ಸಾಲ ವಿತರಿಸುತ್ತಿವೆ. ಆದ ಕಾರಣ ಹಾಲಿ ಇರುವ ವ್ಯವಸ್ಥೆಯಲ್ಲಿ ಯಾವೊಂದು ಸಂಸ್ಥೆಯನ್ನು ಕೈಬಿಡುವ ಸಲಹೆ ಸಮಂಜಸವಲ್ಲ.

## ಕಂದಾಯ ಇಲಾಖೆಯ ನಿವೇಶನಗಳ ಮಂಜೂರಾತಿ ಬಗ್ಗೆ

೧೪೬. ಶ್ರೀ ಗೋಪಾಲ ಮುಕಂದ ಕಾನಡೆ (ಸಿರ್ಸಿ),—ಮಾನ್ಯ ಕಂದಾಯ, ಯೋಜನಾ ಮಂತ್ರಿ, ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರೆವಿನ್ಯೂ ಸೈಟ್ ಅತಿಕ್ರಮಣ ಮಾಡಿದವರಿಗೆ ನಿವೇಶನ ಮಂಜೂರು ಮಾಡಲು ಸರ್ಕಾರಿ ಆದೇಶ ಇದೆಯೇ ?

ಆ) ಶಿರಸಿ-ಸಿದ್ದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಕಂದಾಯ ಇಲಾಖೆಯ ನಿವೇಶನ ಗಳನ್ನು ಈವರೆಗೆ ಎಷ್ಟು ಜನರಿಗೆ ಮಂಜೂರು ಮಾಡಲಾಗಿದೆ. ಹಾಗೂ ಮಂಜೂರು ಆಗದೇ ಇರುವ ನಿವೇಶನಗಳೆಷ್ಟು ?

ಇ) ಉಳಿದವುಗಳನ್ನು ಈವರೆಗೆ ಮಂಜೂರು ಮಾಡದೇ ಇರಲು ಕಾರಣಗಳೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಇದೆ. ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ ೫೨ ಎಲ್‌ಜಿಪಿ ೮೧ ದಿನಾಂಕ ೬-೮-೮೧ರನ್ವಯ ವಸತಿ ಹೀನರು ೧೯-೧೧-೧೯೭೭ರಕ್ಕಿಂತ ಹಿಂದೆ ಮೂರು ವರ್ಷದಿಂದ ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿ ಸ್ವಂತ ಉಪಯೋಗಕ್ಕೆ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಅಂತಹ ಪ್ರಕರಣಗಳಲ್ಲಿ ಕೆಲವು ನಿಯಮಗಳನುಸಾರವಾಗಿ ಮಂಜೂರು ಮಾಡಿ ಸಕ್ರಮಗೊಳಿಸಲು ಅವಕಾಶವಿದೆ.

ಆ) ಮಂಜೂರಾದವು

| ಶಿರಸಿ | ಸಿದ್ದಾಪುರ | ಒಟ್ಟು |
|---|---|---|
| ೧೨೨ | ೧೮ | ೧೪೦ |

ಮಂಜೂರಾಗದೇ ಇರುವ ಅತಿಕ್ರಮಣ ನಿವೇಶನಗಳು

| ಶಿರಸಿ | ಸಿದ್ದಾಪುರ | ಒಟ್ಟು |
|---|---|---|
| ೩೭೪ | ೨೭ | ೪೦೧ |

ಇ) ಹಾಲಿ ಜಾರಿಯಲ್ಲಿರುವ ಆದೇಶ, ನಿಯಮಾವಳಿ ರೀತ್ಯಾ ಈ ಪ್ರಕರಣಗಳನ್ನು ಮಂಜೂರು ಮಾಡಲು ಅವಕಾಶವಿಲ್ಲದ್ದರಿಂದ ಉಳಿದು ಕೊಂಡಿದೆ.